ಶ್ರೀ ಪಂಪಾಪತಿ.—ಇವತ್ತು ದಾವಣಗೆರೆಯಲ್ಲಿ ಬಂದ್ ಮಾಡಿ ತಮ್ಮ ಪ್ರತಿಭಟನೆ ವ್ಯಕ್ತ ಪಡಿಸುತ್ತಿದ್ದಾರೆ. ಅಲ್ಲಿ ಕಿರುಕುಳ ಮುಂದುವರಿದಿದೆ, ದಾವಣಗೆರೆಯಲ್ಲಿ ಪರಿಸ್ಥಿತಿ ಹದಗೆಡುತ್ತಿದೆ. ಕಾನೂನು ಸುವ್ಯವಸ್ಥೆ ಭಂಗಗೊಳ್ಳುತ್ತಿದೆ. ಇದಕ್ಕೆ ಕಾರಣವಾದ ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತಿನ ಕ್ರಮ ಕೈಗೊಂಡು ಆಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಮುಖ್ಯ ಮಂತ್ರಿಗಳು ಭರವಸೆಯನ್ನು ಕೊಡಬೇಕು.

ಉಪಾಧ್ಯಕ್ಷರು.—ತಾವು ನೋಟೀಸ್ ಕೊಡಿ. Please give a notice. I will allow you to speak. ತಾವು ಹಿರಿಯ ಸದಸ್ಯರು ಇದ್ದೀರಿ, ತಮಗೆ ಕಾನೂನು ರೀತಿ ನೀತಿ ಗೊತ್ತು. ತಾವು ಹೀಗೆ ಮಾಡಿದರೆ ಹೇಗೆ ?

ಶ್ರೀ ಪಂಪಾಪತಿ.—ಮುಂಜಿತವಾಗಿ ನಾನು ತಿಳಿಸುತ್ತಿದ್ದೇನೆ. ಇವತ್ತು ದಾವಣಗೆರೆಯಲ್ಲಿ ಬಂದ್ ಆಗಿದೆ.

ಉಪಾಧ್ಯಕ್ಷರು.—ತಾವು ನೋಟೀಸ್ ಕೊಟ್ಟು ಮಾತನಾಡಬೇಕು. ಸದನದ ಸಮಯವನ್ನು ಕಳೆಯಬೇಡಿ. ತಾವು ನೋಟೀಸ್ ಕೊಟ್ಟರೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

೧–೩೦ ಪಿ ಎಂ.

## ಗಮನ ಸೆಳೆಯುವ ಸೂಚನೆ

(i) ಬೆಂಗಳೂರಿನ ರಾಮಯ್ಯ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ದಿನಾಂಕ ೧೭ನೇ ಮಾರ್ಚ್ ೧೯೮೩ ರ ರಾತ್ರಿ ಆರಿತಗಾಯದಿಂದಾಗಿ ವೈದ್ಯಕೀಯ ವಿದ್ಯಾರ್ಥಿಯೊಬ್ಬರು ಮೃತ ಪಟ್ಟಿರುವ ವಿಚಾರದ ಬಗ್ಗೆ:—

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ನನ್ನ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುವ ಮೊದಲು ನಾನು ಎರಡು ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮುನ್ನ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಮೊದಲೇ ಅವರ ಗಮನಕ್ಕೆ ಈ ವಿಚಾರವನ್ನು ತರೋಣ ವೆಂದು ಪ್ರಯತ್ನ ಮಾಡಿದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ನಾನು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) ನಾನು ಈ ಕೆಳಗೆ ಕಂಡ ವಿಸ್ತರಣೆಯನ್ನು ಮಾಡುತ್ತೇನೆ.

೧೭–೩–೮೩ ರಂದು ರಾತ್ರಿ ಸುಮಾರು ೧೦ ಗಂಟೆಗೆ ಎಂ ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ತಮ್ಮೊಳಗೆ ಪರಸ್ಪರ ವಾದವಿವಾದ ನಡೆಸಿದರೆಂದು ಮತ್ತು ಅದರ ಲ್ಲೊಬ್ಬ ಇನ್ನೊಬ್ಬನಿಗೆ, ಅಂದೇ ಕಾಲೇಜಿನ ಮಹಿಳಾ ವಿದ್ಯಾರ್ಥಿಗೆ ಛೇಡಿಸಿದ ಬಗ್ಗೆ ಎಚ್ಚರಿಕೆ ನೀಡಿದ ನೆಂದು ವರದಿಯಾಗಿದೆ. ಈ ಜಗಳವು ಬೆಳೆದು ಎರಡು ಗುಂಪುಗಳ ನಡುವೆ ಹೊಡೆದಾಟಕ್ಕೆ ಕಾರಣ ವಾಯಿತು ಎಂದು ಕಂಡು ಬರುತ್ತದೆ. ಗಾಯಗೊಂಡ ಕೆಲವು ವಿದ್ಯಾರ್ಥಿಗಳಿಗೆ ಮಲ್ಲೇಶ್ವರದ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಆವರಲ್ಲಿ ಯಾರೂ ಈ ಬಗ್ಗೆ ಪೋಲೀಸರಿಗೆ ದೂರು ನೀಡಿಲ್ಲ.

೨. ಆದರೂ, ಆನಂತರ ರಾತ್ರಿಯಲ್ಲಿ ಈ ಎರಡೂ ಗುಂಪುಗಳವರು ರಾಜಿ ಮಾತುಕತೆಗಳಿಗಾಗಿ ಭೇಟಿಯಾದರು. ಈ ಮಾತುಕತೆಗಳ ಕಾಲದಲ್ಲಿ ಅವರುಗಳಿಗೆ ಭಿನ್ನಾಭಿಪ್ರಾಯ ಉಂಟಾಗಿ ಯೂಸುಫ್ ಎಂಬ ಹೆಸರಿನ ವಿದ್ಯಾರ್ಥಿ ರಿಸ್ವಾನ್ ಮುನಾಫ್ ಮತ್ತು ವಂಹೇಂದ್ರಕುಮಾರ್ ಎಂಬ ಇಬ್ಬರು ವಿದ್ಯಾರ್ಥಿಗಳಿಗೆ ಇರಿದನೆಂದು ಆಪಾದಿಸಲಾಗಿದೆ. ಆ ಇಬ್ಬರು ವಿದ್ಯಾರ್ಥಿಗಳನ್ನು ಮಲ್ಲೇಶ್ವರದ ಕೆ. ಸಿ. ಜನರಲ್ ಆಸ್ಪತ್ರೆಗೆ ಕಳಿಸಲಾಗಿದ್ದು ಮುನಾಫ್ ಎಂಬುವನು ಗಾಯಗಳಿಂದಾಗಿ ಸತ್ತುಹೋದ

ನೆಂದು ವರದಿಯಾಗಿದೆ. ಮತ್ತೊಬ್ಬ ವಿದ್ಯಾರ್ಥಿಯು ಗುಣಮುಖನಾಗುತ್ತಿರುವನೆಂದು ವರದಿಯಾಗಿದೆ. ಎರಡು ವಿದ್ಯಾರ್ಥಿಗಳು ತಲೆಮರೆಸಿ ಕೊಂಡಿದ್ದಾರೆಂದು ವರದಿಯಾಗಿದೆ. ಪೋಲೀಸರು, ಇದು ಸರಹತ್ಯೆಯ ಪ್ರಕರಣವಾಗಿ ದಾಖಲಿಸ್ಕೊಂಡಿ ತನಿಖೆ ನಡೆಸುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ ಇದರಲ್ಲಿ ಮುಖ್ಯವಾದ ಆಪರಾಧಿ ಯೂಸುಫ್ ಎಂದು ಗೊತ್ತಾಗಿದೆ. ಭಾಸ್ಕರ್ ಎಂಬ ಮತ್ತೊಬ್ಬ ವಿದ್ಯಾರ್ಥಿ ತಲೆ ತಪ್ಪಿಸಿಕೊಂಡಿದ್ದಾನೆಂದು ವರದಿಯು ಮುಚ್ಚಾಂತರ ಗೊತ್ತಾಗಿದೆ. ಆದರೂ ಇದರ ಬಗ್ಗೆ ಪೋಲೀಸಿನವರು ಸೂಕ್ತ ಕ್ರಮಕೈಗೊಂಡು ಆ ಆಪಾದಿತನನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ರಾಜ್ಯದ ಎಲ್ಲಾ ಚೆಕ್ ಪೋಸ್ಟ್ ಮತ್ತು ಬಾರ್ಡರ್‌ಗಳಲ್ಲಿ ಪೋಲೀಸಿನವರು ಎಚ್ಚರಿಕೆ ಕೊಟ್ಟು ಆ ಆಪಾದಿತರನ್ನು ಹಿಡಿಯುವುದಕ್ಕೆ ಸೂಕ್ತ ಕ್ರಮ ಕೈಗೊಂಡಿದ್ದಾರೆಂದು ಗೊತ್ತಾಗಿದೆ

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಒಂದು ಪ್ರಶ್ನೆ ಉದ್ಭವವಾಗಿದೆ. ಅದು ಏನೆಂದರೆ ಮೊದಲು ಯೂಸುಫ್ ಎಂಬ ವಿದ್ಯಾರ್ಥಿ ರಿಷ್ವಾನ್ ಮುನಾಫ್ ಮತ್ತು ಸುಜೇಂದ್ರ ಕುಮಾರ್ ಎಂಬ ವಿದ್ಯಾರ್ಥಿಗಳಿಗೆ ಇರಿದಾಗ ತಲೆಗೆ ಪೆಟ್ಟಾಗಿ ಕೆ. ಸಿ. ಜನರಲ್ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡು ಹೋಗಿದ್ದಾರೆ. ಆಗ ಡಾಕ್ಟರ್ ಈ ವಿಷಯವನ್ನು ಏತಕ್ಕೆ ಪೋಲೀಸಿನವರಿಗೆ ತಿಳಿಸಲಿಲ್ಲ ? ಇದು ಮೆಡಿಕೊ ಲೀಗಲ್ ಕೇಸ್ ಆಗಿದ್ದರಿಂದ ಪೋಲೀಸಿನವರಿಗೆ ತಿಳಿಸಿದ್ದರೆ ಅವರು ಮೊದಲೇ ಮಂಸ್ಟೆಚ್ಟರಿಕೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಆ ರೀತಿ ಏನಾದರೂ ಡಾಕ್ಟರ್ ಪೋಲೀಸಿನವರಿಗೆ ತಿಳಿಸಿದ್ದರೆ ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎರಡನೆಯದಾಗಿ ಇರಿತಕ್ಕೆ ಒಳಗಾಗಿರತಕ್ಕಂಥ ರಿಷ್ವಾನ್ ಮುನಾಫ್ ಮತ್ತು ಮಹೇಂದ್ರಕುಮಾರ್ ಇವರಲ್ಲಿ ಮುನಾಫ್ ಎಂಬ ವಿದ್ಯಾರ್ಥಿ ತೀವ್ರಗಾಯಗಳಿಂದ ತೀರಿ ಹೋಗಿದ್ದಾನೆ. ಸುಮಾರು ಎರಡು ಮೂರು ಗಂಟೆಗಳವರೆಗೆ ಈ ಘಟನೆ ನಡೆದಿದೆ. ಆದರೂ ಕೂಡ ಪೋಲೀಸಿನವರು ಯಾವ ಕ್ರಮ ತೆಗೆದುಕೊಂಡಿಲ್ಲ, ಇದಕ್ಕೆ ಕಾರಣವೇನು ? ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ತೊಂದರೆಯಾಗಿತ್ತು ?

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ನನ್ನ ಹೇಳಿಕೆಯಲ್ಲಿ ಎಲ್ಲಾ ವಿಚಾರಗಳನ್ನು ಹೇಳಿದ್ದೇನೆ. ಆ ವಿದ್ಯಾರ್ಥಿಗಳಲ್ಲಿ ಜಗಳವುಂಟಾಗಿ ಆ ಜಗಳವನ್ನು ತೀರ್ಮಾನ ಮಾಡುವುದಕ್ಕಾಗಿ ಮಾತುಕತೆ ಕೂಡ ಮಾಡಿದ್ದಾರೆ. ಆ ಮಾತುಕತೆಯಲ್ಲಿ ಉಭಯ ಪಕ್ಷಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಆ ನಂತರ ಕಾಲೇಜಿನಲ್ಲಿ ನಡೆದಿರುವಂಥ ಘಟನೆ ಇದು ನಾನು ಹೇಳಿದಂಥ ವಿವರಣೆ ಸಾಕಾಗಿದೆಯೆಂದು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಇನ್ನು ಮುಂದೆ ಕೈಗೊಳ್ಳಬೇಕಾದಂಥ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಎರಡು ಭಾರಿ ಇರಿತಕ್ಕೆ ಒಳಗಾಗಿದೆಯಲ್ಲವೇ ?

ಶ್ರೀ ವಿ. ಲಕ್ಷ್ಮೀಸಾಗರ್.—ಆದನ್ನೇ ಸರ್ಕಾರ ವಿಚಾರ ಮಾಡಿ ಅಲ್ಲಿ ನಡೆದಿರುವಂತಹ ಘಟನೆಯ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮೊದಲನೆಯ ಬಾರಿ ಇರಿತಕ್ಕೆ ಒಳಗಾಗಿದ್ದಾಗ ಡಾಕ್ಟರ್ ಪೋಲೀಸಿನವರಿಗೆ ತಿಳಿಸಬಹುದಾಗಿತ್ತು. ಆದರೆ ಅವರು ಮೆಡಿಕೊ ಲೀಗಲ್ ಕೇಸಾಗಿದ್ದರೂ ತಿಳಿಸಲಿಲ್ಲ. ಪುನಃ ಇಬ್ಬರಿಗೆ ಡಾಕ್ಟರ್ ಆ ಕೆಲಸವನ್ನು ಮಾಡಿದ್ದಾರೆ ಪೋಲೀಸಿನವರು ಎರಡನೆಯ ಬಾರಿ ನಡೆದ ಘಟನೆಯನ್ನು ತಿಳಿಸಬಹುದಾಗಿತ್ತು ಎಂದು ನಾನು ಹೇಳುವುದಕ್ಕೆ ಆ ಡಾಕ್ಟರ್ ಪೋಲೀಸಿನವರಿಗೆ ವರದಿ ಮಾಡುವುದಕ್ಕೆ ಏನು ತೊಂದರೆಯಾಗಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಆ ವಿದ್ಯಾರ್ಥಿಗಳು ಮೊದಲ ಬಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಾಗ ಯಾವ ರೀತಿಯಾಗಿದೆಯೆಂದು ಆ ವಿದ್ಯಾರ್ಥಿಗಳು ಡಾಕ್ಟರ್‌ಗೆ ತಿಳಿಸಿದ್ದರೆ ಡಾಕ್ಟರ್ ಪೋಲೀಸಿನವರಿಗೆ ವರದಿ ಮಾಡಬಹುದಾಗಿತ್ತು. ಆದರೆ ಆ ವಿದ್ಯಾರ್ಥಿಗಳು ಏನೂ ತಿಳಿಸದೆ ಚಿಕಿತ್ಸೆ ಮಾಡಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಅದು ಮೆಡಿಕೊ ಲೀಗಲ್ ಕೇಸ್ ಆಗುವುದಿಲ್ಲ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುವುದಾದರೆ ಆ ವಿದ್ಯಾರ್ಥಿಗಳು ಹುಡುಗಾಟಿಕೆಯಲ್ಲಿ ಸ್ವಲ್ಪ ಹೆಚ್ಚು ಅಸಡ್ಡೆಯಲ್ಲಿ ಆ ರೀತಿಯ ವರ್ತನೆ ಮಾಡಿದ್ದಾರೆಂದು ಗೊತ್ತಾಗಿದೆ. ಆ ಅವಘಡಿನಲ್ಲಿ ವಿದ್ಯಾರ್ಥಿಗಳು ಇದ್ದಾಗಳ ಶುರುವಾಗಿ ಇದೆಯೆಂದು ನನಗನಿಸುತ್ತದೆ. ಆ

ಜಗಳದಲ್ಲಿ ಚೂರಿ ಹಾಕಿದಾಗ ಅದು ನೇರವಾಗಿ ಹೋಗಿ ಹೃದಯಕ್ಕೆ ಬಿದ್ದಿರಬೇಕು. ಆಗ ಆ ವಿದ್ಯಾರ್ಥಿ ಸತ್ತಿದ್ದಾನೆಂದು ನನಗನಿಸುತ್ತದೆ. ನಾನು ಈ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಆ ಮೆನೇಜ್‌ಮೆಂಟ್‌ನವರನ್ನು ಕರೆದಿದ್ದೆ. ಅವರು ಈ ವಿಷಯವನ್ನು ತಿಳಿಸಿದರು. ಆ ಹುಡುಗ ಮಾನ್ಯ ವಿರೋಧಪಕ್ಷದ ನಾಯಕರ ತಾಲ್ಲೂಕಿನವರೇ. ಆ ಹುಡುಗನಿಗೆ ಮಾನ್ಯ ಮೊಯ್ಲಿಯವರೇ ಸೀಟು ಕೊಡಿಸಿದ್ದರು ಎಂದು ಕಾಣುತ್ತದೆ ಆ ಘಟನೆಯನ್ನು ಯಾರೂ ಉದ್ದೇಶ ಪೂರ್ವಕವಾಗಿ ಮಾಡಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.-ಆ ವಿದ್ಯಾರ್ಥಿಗೆ ಚೂರಿಯಿಂದ ಇರಿದಾಗ ಡಾಕ್ಟರ್‌ಗೆ ಅದು ಗೊತ್ತಾಗುವುದಿಲ್ಲವೆ ?

ಅಧ್ಯಕ್ಷರು.--ತಾವು ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.--ಡಾಕ್ಟರ್ ಮೊದಲೇ ಈ ವಿಷಯವನ್ನು ಪೋಲೀಸಿನವರಿಗೆ ತಿಳಿಸಿದ್ದರೆ ನಡೆಯುವ ಘಟನೆಯನ್ನು ತಪ್ಪಿಸಬಹುದಾಗಿತ್ತು ಎಂದು ನಾನು ಹೇಳುತ್ತೇನೆ, ಅಷ್ಟೇ ವಿನಹಃ ಬೇರೇನೂ ಇಲ್ಲ.

ಶ್ರೀ ಭೀಮಣ್ಣ ಖಂಡ್ರೆ.--ಮಾನ್ಯ ಅಧ್ಯಕ್ಷರೇ ಈ ವಿಷಯದ ಹಿನ್ನೆಲೆಯನ್ನು ಹೇಳುವಂಥ ಅವಶ್ಯಕತೆ ಇದೆ. ಈ ಭಾಸ್ಕರ ಎಂಬ ಹುಡುಗನು ಉತ್ತರ ಪ್ರದೇಶದವನು. ಇವನು ಅಮೇರಿಕಾ ದೇಶದಲ್ಲಿ ಮೊದಲು ಇದ್ದುದರಿಂದ ಅಲ್ಲಿಗೆ ಪರವಾನಿಗೆಯನ್ನು ಪಡೆದುಕೊಳ್ಳದೆ ಹೋಗುವ ಸಂಭವವಿದೆ. ಇವನ ಬಗ್ಗೆ ಅನೇಕ ಸಾರಿ ಮೆನೇಜ್‌ಮೆಂಟ್‌ಗೆ ದೂರು ಕೊಟ್ಟಿದ್ದಾನೆ. ಆದರೂ ಕೂಡ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆ ರೀತಿ ಸೂಕ್ತವಾದಂಥ ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದರೆ ಅಲ್ಲಿ ಸರಿಯಾದ ಫೋನ್ ಇಲ್ಲ, ಪೋಲೀಸ್ ಪಹರೆ ಇಲ್ಲ, ಆಂಬುಲೆನ್ಸ್ ವ್ಯವಸ್ಥೆ ಇಲ್ಲ. ಅಲ್ಲಿ ಸುಮಾರು ೩೦೦ ಜನ ಗಂಡು ಹುಡುಗರು ಇದ್ದಾರೆ. ಇದರಲ್ಲಿ ೧೨೦ ಜನ ಹುಡುಗಿಯರು ವ್ಯಾಸಂಗ ಮಾಡುತ್ತಿದ್ದಾರೆ. ಹುಡುಗರು ಹುಡುಗಿಯರನ್ನು ಛೇಡಿಸುವುದು ಒಂದು ಅಭ್ಯಾಸವಾಗಿ ಬೆಳೆದು ಕೊಂಡು ಬಂದಿತ್ತು. ಆದ್ದರಿಂದ ಅಲ್ಲಿ ಇಂತಹ ಘಟನೆ ನಡೆಯಿತು. ಆ ಮ್ಯಾನೇಜ್‌ಮೆಂಟ್‌ನವರು ಸೂಕ್ತವಾದ ಕ್ರಮ ಮೊದಲಿನಿಂದಲೂ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಅಲ್ಲಿ ಸರಿಯಾದಂಥ ವ್ಯವಸ್ಥೆಯನ್ನು ಮಾಡಿಕೊಡಬೇಕೂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಗಮನದಲ್ಲಿಟ್ಟು ಕೊಂಡಿರುತ್ತೇನೆ. ತನಿಖೆಯನ್ನು ಮುಂದುವರಿಸಿ ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಗೋವಿಂದ ಪಿ. ಒಡೆಯರಾಜ್ —೧೭ನೇ ತಾರೀಖು ರಾತ್ರಿ ಹತ್ತು ಗಂಟೆಗೆ ಮೊದಲ ಜಗಳ ಆಯಿತು ಎಂದು ಹೇಳಿದ್ದಾರೆ. ಅಲ್ಲಿ ಇರಿತದ ಗಾಯಗಳಾಗಿ ಕೆ. ಸಿ ಜನರಲ್ ಆಸ್ಪತ್ರೆಗೆ ಹೋದರು ಎರಡನೆಯದು ರಾತ್ರಿ ಹನ್ನೆರಡು ಮೂವತ್ತಕ್ಕೆ ಹೊಡೆದಾಟ ಆಯಿತು. ಮೊದಲನೇ ಘಟನೆ ಆದ ತಕ್ಷಣ ಪೋಲೀಸರು ಕ್ರಮ ತೆಗೆದುಕೊಂಡಿದ್ದರೆ ಬಹುಶಃ ಈ ಅನಾಹುತವನ್ನು ಉಳಿಸಬಹುದಾಗಿತ್ತು. ಪೋಲೀಸರು ಏಕೆ ಸಮುಂಚಿತವಾಗಿ ಕ್ರಮ ತೆಗೆದುಕೊಳ್ಳುವುದಿಲ್ಲ ? ಒಂದು ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕು. ಆರೋಪಿಗಳಾದ ಭಾಸ್ಕರ ಆರ್ಯ ಮತ್ತು ಯೂಸುಫ್ ಸಾಧಿಕ್ – ಈ ಇಬ್ಬರು ವಿದ್ಯಾರ್ಥಿಗಳು ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜಿಗೆ ಪ್ರವೇಶ ಪಡೆಯುವುದಕ್ಕೆ ಮುಂಚೆ ಅಮೆರಿಕಾದಲ್ಲಿ ವಾಸವಾಗಿದ್ದಂಥವರು. ಈ ಘಟನೆಯಾದಮೇಲೆ ಅವರು ಅಮೇರಿಕಾಕ್ಕೆ ವಾಪಸ್ಸು ಹೋಗುವ ಪ್ರಯತ್ನ ಮಾಡಿದರೂ ಮಾಡಬಹುದು. ಹೇಳಿಕೆಯಲ್ಲಿ ಇದರ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಭಾಸ್ಕರ ಆರ್ಯ ಮತ್ತು ಯೂಸೂಫ್ ಸಾದಿಕ್ ನಾಪತ್ತೆಯಾಗಿದ್ದಾರೆ. ಅವರನ್ನು ಪತ್ತೆ ಹಚ್ಚುವುದಕ್ಕೆ ಪೋಲೀಸರು ಸರ್ವ ಪ್ರಯತ್ನ ಮಾಡುತ್ತಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಅವರು ಅಮೇರಿಕಾಕ್ಕೆ ಓಡಿಹೋಗುವುದಕ್ಕೆ ಪ್ರಯತ್ನ ಪಡಬಹುದು. ಅದನ್ನು ತಡೆಗಟ್ಟಿ, ಆಪಾದಿತರನ್ನು ಪತ್ತೆಹಚ್ಚಿ ಶಿಕ್ಷೆಗೆ ಒಳಪಡಿಸುವುದಕ್ಕೆ ಏನು ಕ್ರಮಕೈಗೊಳ್ಳುವಿರಿ ?

ಶ್ರೀ ಎ. ಲಕ್ಷ್ಮೀಸಾಗರ್. ಮೊದಲು ಜಗಳ ಆದಾಗ, ಈ ಜಗಳದ ಹಂತದಲ್ಲಿ ಪೋಲೀಸರು ಪ್ರವೇಶಮಾಡಿ ಬಿಗಿಯಾವಂಥ ಕ್ರಮ ತೆಗೆದುಕೊಂಡಿದ್ದರೆ ಮುಂದಿನ ಘಟನೆ ನಡೆಯುತ್ತಿರಲಿಲ್ಲ ಎಂಬ ಮಾತನ್ನು ಮಾನ್ಯಸದಸ್ಯರು ಹೇಳಿದ್ದಾರೆ. ಅವರಿಗೆ ನಾನು ಏನು ಉತ್ತರ ಕೊಡಬೇಕೋ ಎಂದು ನನಗೆ ಗೊತ್ತಾಗುತ್ತಿಲ್ಲ. ನಾನು ವಿದ್ಯಾರ್ಥಿಗಳ ಜೊತೆ ಬಹಳ ಹತ್ತಿರದಲ್ಲಿ ಇದ್ದವನು. ಜಗಳವಾದ ತಕ್ಷಣ ಪೋಲೀಸರಿಗೆ ಹೇಳಿಕಳಿಸತಕ್ಕಂಥ ಸನ್ನಿವೇಶಗಳು ಬಹಳ ಕಡಿಮೆ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಹೇಳುತ್ತಿದ್ದೇನೆ ಕೇಳಿ.

ಶ್ರೀ ಕೆ. ಎಚ್. ರಂಗನಾಥ್.—ಅನಾಹುತವಾಗಿದೆ. ಅದನ್ನು ತೀವ್ರವಾಗಿ ಗಮನಿಸಬೇಕು ಅಂತ ನಾವು ಹೇಳುತ್ತಿದ್ದರೆ, ಇವರು ಉತ್ತರ ಹೇಳುತ್ತಾರಂತೆ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಏನು ಹೇಳುತ್ತಿದ್ದೀರೋ ನನಗೆ ಕೇಳಿಸುತ್ತಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಈ ಜಗಳವು ಎರಡು ಗುಂಪುಗಳೊಳಗೆ ಹೊಡೆದಾಟಕ್ಕೆ ಕಾರಣವಾಯಿತು.

ಶ್ರೀ ಕೆ. ಹೆಚ್. ರಂಗನಾಥ್.—ಖೂನಿಯಾಗಿ ಸತ್ತುಹೋಗಿದ್ದಾನೆ. ನಿಮಗೆ ಏನಾದರೂ ಅನುಕಂಪ ಬೇಡವೆ ?

ಶ್ರೀ ಜೆ. ಡಿ. ಸೋಮಪ್ಪ.—ಲಾ ಮಿನಿಸ್ಟರು ಲಾ ಬ್ರೇಕರ್ ಆಗಬಾರದು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಈ ಜಗಳವು ಎರಡು ಗುಂಪುಗಳ ಹೊಡೆದಾಟಕ್ಕೆ ಕಾರಣವಾಯಿತು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಸಾಮಾನ್ಯವಾಗಿ ಈ ರೀತಿ ಮಾತಿನ ಚಕಮಕಿ ನಡೆದಾಗ ಒಬ್ಬರು ಇನ್ನೊಬ್ಬರನ್ನು ಹೀಯಾಳಿಸಿದಾಗ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭ ಬಹಳ ಕಡಿಮೆ. ಮೊದಲನೇ ಸಮಯದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಲಿಲ್ಲ. ಮೊದಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ಇದು ಆಗುತ್ತಿರಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ ನನ್ನ ಉತ್ತರ ಏನೆಂದರೆ ಪರಿಸ್ಥಿತಿ ವಿಕೋಪಕ್ಕೆ ಹೋಗತಕ್ಕಂಥ ಸಂಭವ ಕಂಡುಬಂದ ಸಮಯದಲ್ಲಿ ಎರಡೂ ಕಡೆಯವರನ್ನು ಕರೆದಂ ಮಾತನಾಡಿಸಿದಾಗ ರಾಜಿಯಾದಹಾಗೆ ಕಂಡುಬಂದಿತು. ನಂತರವೇ ಜಗಳವಾಗಿರುವುದು ಸರ್ವೇಸಾಮಾನ್ಯವಾಗಿ ಎಲ್ಲಾ ಸಮಯದಲ್ಲೂ ಇಂತಹ ಸಂದರ್ಭಗಳಲ್ಲಿ ಪೋಲೀಸರು ಬಂದು ಪರಿಸ್ಥಿತಿಯನ್ನು ತಹಬಂದಿಗೆ ತಂದನಂತರವೂ ಪರಿಸ್ಥಿತಿ ವಿಕೋಪಕ್ಕೆ ಹೋಗಿರುವುದು ನನ್ನ ಅನುಭವದಲ್ಲಿ ಇದೇ. ಎರಡನೆಯದಾಗಿ ಮಾನ್ಯ ಸದಸ್ಯರು ಹೇಳಿದಂಥ ವಿಷಯ ಅದೇನೆಂದರೆ ತಲೆತಪ್ಪಿಸಿಕೊಂಡವರು ಅಮೇರಿಕಾ ದೇಶಕ್ಕೆ ಹೋದರೂ ಹೋಗಬಹುದು ಎಂಬುದು. ಆದರೆ ಅವರನ್ನು ಹಿಡಿಸಿಕೊಂಡು ಹೋಗದಂತೆ ಹಿಡಿಯುವುದಕ್ಕೆ ಸರ್ಕಾರದ ಯಂತ್ರ ಮುಂತಾದ ಎಲ್ಲಾ ಪ್ರಯತ್ನಗಳನ್ನೂ ಈಗಾಗಲೇ ಕೈಗೊಂಡಿದ್ದೇವೆ. ಈ ಪ್ರಯತ್ನವನ್ನು ಇನ್ನೂ ಬಿಗಿ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಮಾನ್ಯಸದಸ್ಯರಿಗೆ ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಧರ್ಮಸಿಂಗ್.—ಮಂತ್ರಿಗಳು ಉತ್ತರ ಕೊಡತಕ್ಕಂಥ ರೀತಿಯನ್ನು ಬದಲಾಯಿಸಬೇಕು. ಅವರು ಮನಸ್ಸಿಗೆ ಬಂದಹಾಗೆ ಹೇಳಿದರೆ ಅದನ್ನು ಕೇಳುವುದಕ್ಕೆ ನಾವು ತಯ್ಯಾರಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರೂ ಕೂಡ ಮನಸ್ಸಿಗೆ ಬಂದ ಹಾಗೆ ಪ್ರಶ್ನೆ ಹೇಳುವುದು ಕೂಡ ಸರಿಯಲ್ಲ.

ಉಪಾಧ್ಯಕ್ಷರು.—ಇಲ್ಲಿಗೆ ಈ ವಿಷಯವನ್ನು ಮುಗಿಸಿ ಮುಂದೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.